ಪ್ರೊ|| ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು, ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಬಂದಿದೆ.

ಆ) ಈ ಕೆಲಸಕ್ಕೆ ಬೇಕಾದ ಪೂರ್ಣ ಹಣವನ್ನು ಪುರಸಭೆಯವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಪಾವತಿ ಮಾಡಿಲ್ಲ. ಆದ್ದರಿಂದ ಕೆಲಸ ಸ್ಥಗಿತಗೊಂಡಿದೆ.

ಇ) ಕೆಲಸಕ್ಕೆ ಬೇಕಾದ ಪೂರ್ಣ ಹಣವನ್ನು ಪುರಸಭೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಪಾವತಿ ಮಾಡಿದ ನಂತರ ಈ ಕೆಲಸವನ್ನು ಮಂಡಲಿಯು ಪ್ರಾರಂಭಿಸುವುದು.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ ಅಲ್ಲಿ ಕೆಲಸ ಸ್ಥಗಿತವಾಗಿದೆಯೆಂದು ಮಾನ್ಯ ಮಂತ್ರಿಗಳ ಉತ್ತರದಲ್ಲಿ ಹೇಳಿದ್ದಾರೆ ಆದರೆ ಅಲ್ಲಿ ಇನ್ನೂ ಕೆಲಸ ಪ್ರಾರಂಭವಾಗಿಯೇ ಇಲ್ಲ. ನಗರ ಸಭೆಯವರು ಸುಮಾರು ೫ ಲಕ್ಷ ರೂಪಾಯಿಗಳ ಹಣವನ್ನು ಒಳಚರಂಡಿ ಮಂಡಲಿಯವರಿಗೆ ಕೊಟ್ಟಿದ್ದಾರೆ. ಆದರೆ ಇತ್ತೀಚೆಗೆ ನನಗೆ ತಿಳಿದ ಒಂದು ಪರ್ತಮಾನದ ಪ್ರಕಾರ ಒಳಚರಂಡಿ ಮಂಡಲಿಯವರು ಒಂದು ರಸಲ್ಯೂಷನ್ ಮಾಡಿದ್ದಾರಂತೆ. ಆ ರೆಸಲ್ಯೂಷನ್ ಏನೆಂದರೆ ನೂರಕ್ಕೆ ನೂರರಷ್ಟು ಹಣವನ್ನು ಕಟ್ಟಿದರೆ ಮಾತ್ರ ಕೆಲಸ ಪ್ರಾರಂಭ ಮಾಡಬೇಕು ಇಲ್ಲದಿದ್ದರೆ ಬೇಡವೆಂದು. ಆದರೆ ನನಗೆ ತಿಳಿದ ಮಟ್ಟಿಗೆ ಪುರಸಭೆಯು ಒಂದು ಭಾಗದಷ್ಟು ಹಣವನ್ನು ಕೊಟ್ಟರೆ ಆ ಕೆಲಸವನ್ನು ಮಂಜೂರು ಮಾಡಬೇಕೆಂದು, ಆಡಳಿತಾತ್ಮಕ ಅನುಮೋದನೆಯನ್ನು ಕೊಡಬೇಕೆನ್ನುವ ರೂಪರೇಷೆಗಳು ಇವೆ. ಆದ್ದರಿಂದ ಇನ್ನು ಒಂದು ತಿಂಗಳೊಳಗಾಗಿ ನಾವು ೫ ಲಕ್ಷ ರೂಪಾಯಿಗಳ ಹಣವನ್ನು ಒಳಚರಂಡಿ ಮಂಡಲಿಯವರಿಗೆ ತುಂಬುತ್ತೇವೆ. ಕೂಡಲೇ ಅಲ್ಲಿ ಕೆಲಸ ಪ್ರಾರಂಭಿಸುವಂತೆ ಆಜ್ಞಾಪನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಒಂದು ನೀರು ಸರಬರಾಜು ಮಾಡತಕ್ಕಂಥ ಕೆಲಸಕ್ಕೆ ಸುಮಾರು ೨೩ ಲಕ್ಷ ೩೦ ಸಾವಿರ ರೂಪಾಯಿಗಳ ಹಣ ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳುವ ಪ್ರಕಾರ ಪುರಸಭೆಯಿಂದ ನಮಗೆ ಹಣ ಬರಬೇಕಾಗುತ್ತದೆ. ಅವರು ಬರೀ ೫ ಲಕ್ಷ ರೂಪಾಯಿಗಳನ್ನು ಒಳಚರಂಡಿ ಮಂಡಲಿಗೆ ತುಂಬಿದರೆ ನಾವು ಕೆಲಸ ಪ್ರಾರಂಭ ಮಾಡಿಸುವುದಕ್ಕೆ ಆಗುವುದಿಲ್ಲ. ನಾವು ಕೆಲಸ ಪ್ರಾರಂಭ ಮಾಡಬೇಕಾದರೆ ಆ ಕೆಲಸವನ್ನು ಗುತ್ತಿಗೆದಾರರಿಗೆ ಮಹಿಸಿಕೊಡಬೇಕಾಗುತ್ತದೆ. ಹಣ ನಮಗೆ ಬರುವಂತಹ ಚಿನ್ಹೆಯೇ ಇಲ್ಲದೆ ನಾವು ಯಾವ ರೀತಿ ಕಂಟ್ರಾಕ್ಟ್‌ದಾರರಿಗೆ ಆ ಕೆಲಸವನ್ನು ಮಹಿಸುವುದು ? ಮಾನ್ಯ ಸದಸ್ಯರು ವಕೀಲರು ಅವರಿಗೆ ಎಲ್ಲಾ ವಿಚಾರ ಗೊತ್ತಿದೆ.

ಶ್ರೀ ಕೆ.ಬಿ. ಕೋಳಿವಾಡ್.— ಮಾನ್ಯ ಅಧ್ಯಕ್ಷರೇ ಈ ಯೋಜನೆಯ ಅಂದಾಜು ಹಿಂದೆ ೧೨ ಲಕ್ಷ ರೂಪಾಯಿಗಳು ಮಾತ್ರ ಇತ್ತು. ಈಗ ಕಾಸ್ಟ್ ಚಾಪ್ಟಿಯಾಗಿ ಅದರ ಅಂದಾಜು ಯೋಜನೆ ಸುಮಾರು ೨೩ ಲಕ್ಷ ೩೦ ಸಾವಿರ ರೂಪಾಯಿಗಳಷ್ಟರಲ್ಲಿವಿಗೂ ಹೋಗಿದೆ. ನಾವು ಡಿಲೇ ಮಾಡಿದಷ್ಟು ಅಂದಾಜು ಬೆಲ್ಟ್ ಚಾಪ್ಟಿಯಾಗುತ್ತಾ ಹೋಗುತ್ತದೆ. ಈಗಾಗಲೇ ನಾವು ೫ ಲಕ್ಷ ರೂಪಾಯಿಗಳನ್ನು ತುಂಬಿದ್ದೇವೆ. ಇನ್ನು ಒಂದು ತಿಂಗಳೊಳಗಾಗಿ ೫ ಲಕ್ಷ ರೂಪಾಯಿಗಳನ್ನು ತುಂಬುತ್ತೇವೆ. ಆಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡುತ್ತೀರಾ ?

ಅಧ್ಯಕ್ಷರು.—ಅವರು ಹಣ ಕೊಡುತ್ತಾರಂತೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹಣ ಕೊಡಲಿ ಆಮೇಲೆ ನಾನು ಮುಂದಿನ ಕ್ರಮ ತೆಗೆದು ಕೊಳ್ಳುತ್ತೇನೆ.

ಹರಿಜನ ಹಾಗೂ ಗಿರಿಜನ ಕೇರಿಗಳಲ್ಲಿ ಕೊರೆಯಲಾದ ಕೊಳವೆ ಬಾವಿಗಳು

೧೬೮ (೨೬೨೩) ಶ್ರೀ ಟಿ. ಸಿ. ಮಾನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಗಾಮೀಣಾಭಿವೃದ್ಧಿ, ಪಶು ಪಾಲನಾ ಹಾಗೂ ಪಶು ಸಂಪತ್ತು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

೧) ರಾಜ್ಯದಲ್ಲಿ ಇದುವರೆವಿಗೂ ಕೊಡಿಯಲಾದ ನೀರಿಗೊಸ್ಕರ ಪಾಕಿರುವ ಕೊಳವೆ ಬಾವಿಗಳೆಷ್ಟು ?

೨) ಇವುಗಳಲ್ಲಿ ಹರಿಜನ ಗಿರಿಜನ ಕೇರಿಗಳಲ್ಲಿ ಪಾಕಿರುವ ಕೊಳವೆ ಬಾವಿಗಳೆಷ್ಟು ?

೩) ಇನ್ನು ಹರಿಜನ ಗಿರಿಜನ ಕೇರಿಗಳಿಗೆ ಕುಡಿಯುವ ನೀರಿನ ಕೊಳವೆ ಬಾವಿಗಳ ಬೇಡಿಕೆ ಇರುವು ದರಿಂದ ಸದರೀ ಬೇಡಿಕೆಗಳನ್ನು ಈಡೇರಿಸಲು ಸರಕಾರದವರು ತೀವ್ರವಾಗಿ ಕ್ರಮ ತೆಗೆದುಕೊಳ್ಳು ವರೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

೧) ೧,೦೦,೫೫೭ (೩೦-೧೧-೮೬ ರಂತೆ ಯಶಸ್ವಿಯಾದ ಕೊಳವೆ ಬಾವಿಗಳು)

೨) ೯೩೨೦ (೩೦-೧೧-೮೬ ರಂತೆ ಯಶಸ್ವಿಯಾದ ಕೊಳವೆ ಬಾವಿಗಳು)

೩) ಹೌದು, ಈ ವರ್ಷದಲ್ಲಿ ಸುಮಾರು ೨೪೬೯ ಕೊಳವೆ ಬಾವಿಗಳನ್ನು ಹಾಕುವ ಕಾರ್ಯಕ್ರಮ ವಿದೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ ಇದುವರೆವಿಗೂ ಹರಿಜನ ಕೇರಿಗಳಲ್ಲಿ ೯೩೨೦ ಕೊಳವೆಬಾವಿಗಳನ್ನು ತೋಡಿಸಲಾಗಿದ್ದು ಈ ವರ್ಷ ೨೪೬೯ ಕೊಳವೆ ಬಾವಿಗಳನ್ನು ತೋಡಿಸ ಲಾಗುವುದೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಬಹುತೇಕ ಪಳ್ಳಿಗಳಲ್ಲಿ ರಾಜಕೀಯ ಒತ್ತಡಗಳಿಂದ ಜಿಯೋಫಿಜಿಕಲ್‌ಸಿಸ್ಟ್‌ರವರು ನೀರು ಬರುವಂತಹ ಜಾಗಗಳನ್ನು ತೋರಿಸದೆ ನೀರು ಇಲ್ಲದ ಕಡೆಗಳಲ್ಲಿ ಪಾಯಿಂಟ್ ಕೊಡುತ್ತಾರೆ. ಇದರಿಂದ ಹರಿಜನರಿಗೆ ಕುಡಿಯುವ ನೀರು ಸಿಗದೆ ಬಹಳ ತೊಂದರೆಯಾಗುತ್ತಿರುವ ಬಗ್ಗೆ ನನಗೆ ಅನೇಕ ದೂರುಗಳು ಬಂದಿವೆ. ನನ್ನ ತಾಲ್ಲೂಕಿ ನಲ್ಲಿ ಸುಮಾರು ೨೨ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆದ್ದರಿಂದ ಹರಿಜನ ಕೇರಿಗಳಲ್ಲಿ ಕಡ್ಡಾಯವಾಗಿ ಒಂದು ಕೊಳವೆ ಬಾವಿಯನ್ನು ಹಾಕಿಸಿಕೊಡುವಂತಹ ವ್ಯವಸ್ಥೆಯನ್ನು ಮಾನ್ಯ ಮಂತ್ರಿ ಗಳು ಮಾಡುತ್ತಾರೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ಹರಿಜನ ಕೇರಿಗಳಲ್ಲಿ ಕಡ್ಡಾಯವಾಗಿ ಒಂದೊಂದು ಕೊಳವೆ ಬಾವಿಯನ್ನು ತೋಡಿಸಬೇಕೆಂದು ಸರ್ಕಾರಿ ಆಜ್ಞೆ ಈಗಾಗಲೇ ಇದೆ ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಮ್ ಮಾಡಿದರೂ ಸಹ ಮೊದಲನೆಯ ಟ್ಯಾಪ್ ಅನ್ನು ಹರಿಜನ ಕೇರಿಗಳಲ್ಲಿ ಹಾಕಬೇಕೆನ್ನುವ ಬಗ್ಗೆ ಕೂಡ ಆದೇಶ ಇದೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವೊಂದು ಕಡೆಗಳಲ್ಲಿ ರಾಜಕೀಯ ಒತ್ತಡಗಳು ಇವೆ. ಅದು ಏನೇ ಇದ್ದರೂ ಸಹ ನಾವು ಜಿಯೋಲಜಿಸ್ಟ್‌ಗಳಿಂದ ಸರ್ವೆ ಮಾಡಿಸಿ ಆವರಿಂದ ಫೀಲ್ ಆಯಿತು ಎಂದರೆ ಮತ್ತೆ ಜಿಯೋಫಿಜಿಕಲ್ ಟೆಸ್ಟ್ ಮಾಡಿಸುತ್ತೇವೆ. ಆದರೂ ಸಾಧ್ಯವಾಗಲಿಲ್ಲವೆಂದರೆ ಯಂತ್ರಗಳಿಂದ ಟೆಸ್ಟ್ ಮಾಡಿಸಿ ನೋಡುತ್ತೇವೆ. ಆಗಲೂ ಸಹ ನೀರು ಸಿಗಲಿಲ್ಲವೆಂದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಮೊದಲು ಈ ಎಲ್ಲಾ ಪ್ರಯತ್ನಗಳನ್ನು ಮಾಡಿ ನೋಡುತ್ತೇವೆ. ಆ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ ನವರು ಸರ್ವೆ ಮಾಡಿ ನೋಡಿದಾಗ ಅಲ್ಲಿ ನೀರು ಬರುವುದಿಲ್ಲವೆಂದು ಹೇಳಿರುವ ಉದಾಹರಣೆಗಳು ಸಾಕಷ್ಟು ಇವೆ. ಮಾನ್ಯ ಮಂತ್ರಿಗಳು ಜಿಯಾಲಜಿಸ್ಟ್‌ಗಳು ನೋಡಿ ನೀರು ಬರಲಿಲ್ಲವೆಂದು ಹೇಳಿದ ಮೇಲೆ ಸೀನಿಯರ್ ಜಿಯಾಲಜಿಸ್ಟ್‌ಗಳಿಂದ ಸರ್ವೆ ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಸರ್ಕಾರ ಏನೇ ಮಾಡಿದರೂ ಸಹ ಜಿಯಾಲಜಿಸ್ಟ್‌ಗಳು ಉದ್ದೇಶಪೂರ್ವಕವಾಗಿ ನೀರು ಇಲ್ಲದೆ ಇರುವಂತಹ ಕಡೆಗಳಲ್ಲಿ ಪಾಯಿಂಟ್ ತೋರಿಸುತ್ತಾರೆ, ನನ್ನ ತಾಲೂಕಿನಲ್ಲಿ ನೀರು ಸಿಗುವುದಿಲ್ಲವೆಂದು ಹೇಳಿ ಉದ್ದೇ ಶಪೂರ್ವಕವಾಗಿಯೇ ಹರಿಜನ ಕೇರಿಗಳಲ್ಲಿ ಬೋರ್‌ವಲ್‌ಗಳನ್ನು ಹಾಕಿಲ್ಲವೆಂದು ತಿಳಿದು ಬಂದಿದೆ. ಇದನ್ನು ಕೆಲವು ರಾಜಕೀಯ ಕಾರ್ಯಕರ್ತರು ಮಾಡುತ್ತಿದ್ದಾರೆ. ಆದ್ದರಿಂದ ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯಬಾರದೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ತಾವು ಕೊಡಬೇಕು. ಆಮೇಲೆ, ಸರ್ಕಾರದವರು ೨೦ ಸಾವಿರ ೩೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಬೋರ್ ವೆಲ್‌ಗಳನ್ನು ಹಾಕಿಸುತ್ತಾರೆ. ಕೆಲವು ಬೋರ್‌ವೆಲ್‌ಗಳಲ್ಲಿ ನೀರೇ ಬರುವುದಿಲ್ಲ. ನೀರು ಬರದೇ ಇದ್ದ ಕಡೆ, ಜಾಗವನ್ನು ತೋರಿಸುವ ಜಿಯೋಫಿಸಿಸ್ಟ್‌ಗಳ ಮೇಲೆ ಕ್ರಮ ತೆಗೆದುಕೊಳ್ಳುವ ಹಾಗೆ ಮಾಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಿರ್ದಿಷ್ಟವಾಗಿ ಇಂಥ ಕಡೆ ರಾಜಕೀಯ ಒತ್ತಡಗಳಿಗೆ ಒಳಗಾಗಿ ಬೋರ್‌ವೆಲ್‌ಗಳನ್ನು ಹಾಕಿಲ್ಲವೆಂದು ತಿಳಿಸಿದರೆ ತನಿಖೆ ಮಾಡಿಸುತ್ತೇನೆ ಹಾಗೂ ಆಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಎರಡನೆಯದು, ಹುಟ್ಟಿದ ಮಕ್ಕಳೆಲ್ಲಾ ಬದುಕುತ್ತವೆ ಎಂಬ

ನಂಬಿಕೆ ಇಲ್ಲ. ಹಾಕಿದ ಬಾವಿಗಳಲ್ಲಾ ಸಫಲವಾಗುವಂಥ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ತಂತ್ರಜ್ಞಾನ ಇನ್ನು ಬೆಳೆದಿಲ್ಲ. ವಿಫಲವಾಗುವುದು ಸಹಜ.

ಬೆಂಗಳೂರು ನಗರವಲ್ಲಿನ ನಗರಪಾಲಿಕೆಯ ಪರವಾನಿಗೆಯ ಬಗ್ಗೆ

೧೬೯(೩೧೮) ಶ್ರೀ ಕೆ.ಪೆಚ್. ಪಾಟೀಲ್.—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರಪಾಲಿಕೆ ಪರವಾನಿಗೆಯನ್ನು ಮಂಜೂರು ಮಾಡಿರುವ ಬಹು ಅಂತಸ್ತಿನ ಘಟಿಡಿ ಕಟ್ಟಡಗಳಲ್ಲಿ ಆಕ್ಯುಪೆನ್ಸಿ ಸರ್ಟಿಫಿಕೇಟುಗಳಿಗೆ ಮಂಜೂರಾತಿಗಾಗಿ ಬಂದಿರುವ ಅರ್ಜಿಗಳೆಷ್ಟು ?

ಆ) ಅವುಗಳಲ್ಲಿ ಆಕ್ಯುಪೆನ್ಸಿ ಸರ್ಟಿಫಿಕೇಟುಗಳಿಗೆ ಕೊಡದಿರುವ ಕಟ್ಟಡಗಳೆಷ್ಟು, ಹಾಗೆ ಕೊಡದಿರಲು ಬಲವಾದ ಕಾರಣಗಳೇನು :

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಸಂಸದೀಯ ವ್ಯವಹಾರ ಆಹಾರ ಸರಬರಾಜು ಮಂತ್ರಿಗಳು).—

ಅ) ೧೧೨

ಆ) ೯

ಪಲಾನಿಭಂದ ನೆಗಳಿಗೆ ವ್ಯತಿರಿಕ್ತವಾಗಿ ಮಂಜೂರು ಮಾಡಿರುವ ಕಟ್ಟಡಗಳಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟುಗಳನ್ನು ನೀಡಿಲ್ಲ. ಆದ್ದರಿಂದ ಮಂಜೂರಾದ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟಿದ್ದರೂ ಸಹ ಪಲಯ ನಿಭಂದನೆಗಳಿಗೆ ವ್ಯತಿರಿಕ್ತವಾಗಿ ಮಂಜೂರಾಗಿದ್ದ ನಕ್ಷೆಗಳ ಕಟ್ಟಡಗಳಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ನೀಡಿಲ್ಲ.

ಶ್ರೀ ಕೆ.ಪೆಚ್. ಪಾಟೀಲ್.—೯ ಕಟ್ಟಡಗಳಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ಕೊಡಲಾಗಿದೆ ಎಂದು ಹೇಳಿದ್ದೀರಿ. ಆ ಕಟ್ಟಡಗಳು ಯಾವುವು ? ೧೧೨ ಕಟ್ಟಡಗಳಲ್ಲಿ ಆಕ್ಯುಪೆನ್ಸಿ ಕೋರಿ ಅಪ್ಲಿಕೇಷನ್ ಬಂದಿದೆ ಎಂದು ಹೇಳಿದ್ದೀರಿ. ಈ ಅಪ್ಲಿಕೇಷನ್‌ಗಳನ್ನು ಯಾವಾಗ ನಿರ್ವಾಲಿ ಮಾಡುತ್ತೀರಿ ? ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ಫ್ಲೋರ್‌ಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ಕೊಡಲು ೧ ಲಕ್ಷ ರೂಪಾಯಿಗಳ ವರೆಗೂ ಡಿಪಾಸ್ಯಾಂಡ್ ಮಾಡುತ್ತಾರೆಂದು ನನ್ನ ಕಡೆ ಅನೇಕ ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ. ಇವರ ಬಗ್ಗೆ ತನಿಖೆ ಮಾಡಿ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣವನ್ನು ವಸೂಲಿ ಮಾಡಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಅಥವಾ ಹಣವನ್ನು ಕೊಟ್ಟಂಥ ಯಾವುದಾದರೂ ಉದಾಹರಣೆ ಕೊಟ್ಟರೆ ಅವರ ಬಗ್ಗೆ ವಿಚಾರಣೆ ಘಾಡಿ ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಇನ್ನು ೯ ಕಟ್ಟಡಗಳು ಯಾವುವು ಎಂದು ಕೇಳಿದ್ದೀರಿ. ೧) ಗಾಲ್ಫ್ ಲಿಂಕ್ ಅಪಾರ್ಟ್‌ಮೆಂಟ್ ೨) ಮೆಷಿನ್ ಟೂಲ್ಸ್ ಪ್ರೈವೇಟ್ ಲಿಮಿಟೆಡ್ ೩) ಕಾಂಟಿನೆಂಟಲ್ ಎಕ್ಸ್‌ಪೋರ್ಟ್ಸ್ ೪) ಲಾಲ್‌ಚಂದ್ ದಿಗಂಬರ್ ಚಂದ್ ೫) ವಿನಾಯಕ ಎಂಟರ್‌ಪ್ರೈಸಸ್ ೬) ಮಹಮದ್ ಸಲೀಮ್ ೭) ಡಿ ಕರ್ಜನ್ ರೋಡ್ ೮) ಸೋನಾ ಪಾತ್ರ ಸೋನಿ ಮಿಲ್ಲರ್ ರೋಡ್ ೯) ಏಲೇಜಾ ಕಾಂಪ್ಲೆಕ್ಸ್, ಮುನಿರೆಡ್ಡಿಪಾಳ್ಯ, ೧೦) ಒಕ್ಕಲಿಗರ ಸಂಘ ಹಬ್ಸಸ್ ವೃತ್ತ. ಇನ್ನೂ ಒಂದು ಕೇಳಿದ್ದೀರಿ. ೧೧೨ ಅಪ್ಲಿಕೇಷನ್‌ಗಳಲ್ಲಿ ೧೦೩ಕ್ಕೆ ಆಕ್ಯುಪೆನ್ಸಿ ಸರ್ಟಿಫಿಕೇಟನ್ನು ಕೊಡಲಾಗಿದೆ. ಇವರಲ್ಲಿ ಎರಡು ಭಾಗ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೆಲವರು ಹೈಕೋರ್ಟಿನ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋದರು ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇದ್ದರೂ ಸಬ್ಜೆಕ್ಟ್ ಟು ಡಿಸಿಷನ್ ಎಂದು ಕೆಲವರಿಗೆ ನೀವು ಸರ್ಟಿಫಿಕೇಟ್‌ಗಳನ್ನು ಕೊಡಿ ಎಂದು ಹೈಕೋರ್ಟಿನವರು ಹೇಳಿದರು ಆ ಕಂಡೀಷನ್‌ನಂತೆ ಆಕ್ಯುಪೆನ್ಸಿ ಸರ್ಟಿಫಿಕೇಟನ್ನು ಕೊಟ್ಟಿದ್ದೇವೆ. ಎಷ್ಟು ಜನರಿಗೆ ಈ ತರಹ ಕೊಡುವುದಕ್ಕೆ ಸಾಧ್ಯ ಇದೆಯೋ ಅಷ್ಟು ಜನರಿಗೆ ಕೊಟ್ಟಿದ್ದೇವೆ.

ಶ್ರೀ ಕೆ. ಪೆಚ್. ಪಾಟೀಲ್.—ಇತ್ತೀಚೆಗೆ ಸುಪ್ರೀಂ ಕೋರ್ಟ್‌ನವರು ೧ ಪ್ಲಸ್ ೩ ಕ್ಕಿಂತ ಹೆಚ್ಚಾಗಬಾರದೆಂದು ಆದೇಶಕೊಟ್ಟಿದ್ದಾರೆ. ಆ ಕಟ್ಟಳೆಗೆ ಅನುಗುಣವಾಗಿ ಇನ್ನು ಮೇಲೆ ೧ ಪ್ಲಸ್ ೩ ಕ್ಕಿಂತ ಹೆಚ್ಚಿಗೆ ಕೊಡುವುದಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಆರ್ಡರ್ ಮಾಡುತ್ತೀರಾ ? ಅಥವಾ ಈ ವ್ಯಾಖ್ಯಾ